ನಿಮ್ಹಾನ್ಸಿನ ನನ್ನ ಆತ್ಮೀಯ ಅಧ್ಯಾಪಕ ವೃಂದ, ಸಹೋದ್ಯೋಗಿ ಭಾಂಧವರೇ ಮತ್ತು ವಿದ್ಯಾರ್ಥಿ ಮಿತ್ರರೇ,

ನಮ್ಮ ಪ್ರತಿಷ್ಠಿತ ಸಂಸ್ಥೆಯ ನಿರ್ದೇಶಕ - ಕುಲಪತಿಯಾಗಿ, ನನ್ನ ಅವಧಿಯ ಐದುವರುಷ ಮುಗಿಸುತ್ತಿರುವ ಈ ಸಂದರ್ಭದಲ್ಲಿ. ನಿಮಗೆಲ್ಲರಿಗೂ ಶುಭ ಹಾರೈಸಲು ಬಯಸುತ್ತೇನೆ ಮತ್ತು ಪ್ರತಿಯೊಬ್ಬರಿಗೂ ನಿಮ್ಮ ಬೆಂಬಲ - ಸಹಕಾರಕ್ಕಾಗಿ ಧನ್ಯವಾದಗಳನ್ನು ತಿಳಿಸಬಯಸುತ್ತೇನೆ. ರೋಗಿಗಳ ಹೃದಯವಂತ ಸೇವೆಗೆ ಮತ್ತು ಉತ್ಕೃಷ್ಟ ಅಧ್ಯಯನಕ್ಕಾಗಿ, ಪ್ರಪಂಚದಾದ್ಯಂತ ಹೆಸರು ವಾಸಿಯಾಗಿರುವ ಈ ಸಂಸ್ಥೆಯ ಮುಖ್ಯಸ್ಥನಾಗುವ ಭಾಗ್ಯ ನನ್ನದಾಗಿತ್ತು.ವೈಯುಕ್ತಿಕ ನೆಲೆಯಲ್ಲಿ, ಕಳೆದ ಐದು ವರುಷ, ಕಲಿಕೆಯ ಒಂದು ಅಮೋಘ ಪಯಣವಾಗಿತ್ತು.

ನಾವೆಲ್ಲಾ ಒಟ್ಟಾಗಿ ಮಹತ್ತರವಾದ್ದನ್ನು ಸಾಧಿಸಿದ್ದೇವೆ. ಸೆಪ್ಟಂಬರ್ 2012ರಲ್ಲಿ, ಭಾರತ ಸರ್ಕಾರ, ನಿಮ್ಹಾನ್ಸ್ ಸಂಸ್ಥೆಯನ್ನುಪ್ರತ್ಯೇಕ ಕಾನೂನಿಗೆ ಒಳಪಡಿಸಿ'ರಾಷ್ಟ್ರೀಯ ಮಹತ್ವದ ಸಂಸ್ಥೆ' ಎಂದು ಘೋಷಿಸಿ, ಈ ನಿಟ್ಟಿನಲ್ಲಿನ ಪ್ರಕ್ರಿಯೆಯನ್ನು ನವೆಂಬರ್ 2013 ಕಡೆಯಲ್ಲಿ ಶುರುಮಾಡಿದ್ದು, ಯಾವುದೇ ಸಂಸ್ಥೆಗೆ ಸಲ್ಲಬಹುದಾದ ಅನುಪಮ ವೈಶಿಶ್ಯವೆ ಹೌದು. ಇದು ಸಾಧ್ಯವಾಗಿದ್ದು, ನಿಮ್ಹಾನ್ಸ್ ಗೆ ದೇಶದಲ್ಲೇ ಎಕೆ, ಪ್ರಪಂಚದಾದ್ಯಂತ, ಸಂದಿರುವ ಪ್ರಖ್ಯಾತಿ - ಗೌರವಗಳಿಂದಾಗಿ ಮಾತ್ರ. ಕಾರ್ಯತತ್ಪರತೆ, ಶಿಸ್ತುಬದ್ಧ ಕೆಲಸ ಮತ್ತು ವೃತ್ತಿಗೌರವಕ್ಕಾಗಿ ನಾವು ಪ್ರಸಿದ್ಧಿ ಪಡೆದಿದ್ದೇವೆ.

ಕಳೆದ ಐದು ವರ್ಷಗಳಲ್ಲಿ, ನಾವು, ಆಧ್ಯಾಪಕ ವೃಂದದ ಸಲುವಾಗಿ, Behavioural ವಿಜ್ಞಾನ, ನರ ವಿಜ್ಞಾನ ಮತ್ತು ಮೂಲವಿಜ್ಞಾನ ವಿಭಾಗಗಳಲ್ಲಿ, ದೇಶದಲ್ಲೇ ಅತಿ ಶ್ರೇಷ್ಠರನ್ನು ಆಯ್ಕೆಮಾಡಿದ್ದೇವೆ. ಹಲವು ನಗರಗಳಲ್ಲಿ, ಏಕಕಾಲದಲ್ಲಿ ಕೈಗೊಂಡ ಪ್ರವೇಶ ಪರೀಕ್ಷೆ ಮುಖಾಂತರ, ದೇಶದಾದ್ಯಂತ ಉತ್ತಮ ಪ್ರತಿಭಾಶಾಲಿ ವಿದ್ಯಾರ್ಥಿಗಳು ನಮ್ಮಲ್ಲಿ ಅಧ್ಯಯನ ಮಾಡಲು ಸಾಧ್ಯವಾಗಿದೆ. ಈ ಯುವ ಪೀಳಿಗೆ, ನಿಮ್ಹಾನ್ಸ್ ನ ಸತ್ಸಂಪ್ರದಾಯಗಳನ್ನು ಹಾಗೂ ಅದರ ತತ್ವಾದರ್ಶಗಳನ್ನು, ಮುಂದಿನ ದಶಕಗಳಲ್ಲಿ, ಎತ್ತಿ ಹಿಡಿದು ನಡೆಸಿಕೊಂಡು ಹೋಗುತ್ತಾರೆಂದು, ನನಗೆ ಖಂಡಿತಾ ನಂಬಿಕೆಯಿದೆ.

ಯಾವುದೇ ವ್ಯಕ್ತಿ, ನಿರ್ದೇಶಕನಾದರೂ ಸಹ, ಒಂಟಿಯಾಗಿ ಸಾಧಿಸಲು ಆಗುವುದಿಲ್ಲಾ. ನಿಮ್ಹಾನ್ಸ್ ನ ಸುಮಾರು 2200 ಉದ್ಯೋಗಿಗಳು (ಸಹಾಯಕ ಸಿಬ್ಬಂದಿ, ಸುರಕ್ಷಾದಳ, ತಾಂತ್ರಿಕ ವರ್ಗ, ಶುಶ್ರೂಷಕರು, ನಿವಾಸಿ ವೈದ್ಯರು, ಆಡಳಿತ ಸಿಬ್ಬಂದಿ ಮತ್ತು ಆಧ್ಯಾಪಕರು ಒಳಗೊಂಡಂತೆ), ೮೦೦ಕ್ಕೂ ಹೆಚ್ಚು ವಿದ್ಯಾರ್ಥಿಗಳು, ನನ್ನೊಟ್ಟಿಗೆ ಹೆಜ್ಜೇ ಇಟ್ಟಿದ್ದಾರೆ; ಹಲವಾರು ಬಾರಿ, ಇನ್ನೂ ಮುನ್ನಡೆದು, ರಾಷ್ಟ್ರದಲ್ಲಿ ನಮ್ಮ ಸ್ಥಾನವನ್ನು ಕಾಯ್ದಿರಿಕೊಳ್ಳಲು ಸಾಧ್ಯವಾಗಿಸಿದ್ದಾರೆ. ಈ ಅವಧಿಯಲ್ಲಿ, ಮೂವರು ಅಪೂರ್ವ ಮತ್ತು ಅತ್ಯಂತ ಸಮರ್ಥ ಸನ್ಮಾನ್ಯ ಆರೋಗ್ಯ ಮಂತ್ರಿಗಳು ಅಧ್ಯಕ್ಷರಾಗಿದ್ದು, ಕರ್ನಾಟಕ ಸರ್ಕಾರದ ಇಬ್ಬರು ಮಂತ್ರಿಗಳು ಉಪಾಧ್ಯಕ್ಷರಾಗಿದ್ದು, ಅವರೊಡನೆ ಕೆಲಸ ಮಾಡುವ ಸುಯೋಗ ನನ್ನದಾಗಿತ್ತು, ಕೇಂದ್ರ ಹಾಗೂ ರಾಜ್ಯ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಾಲಯದ ಹಲವು ದಕ್ಷಆಡಳಿತಗಾರರ ಅಮೂಲ್ಯ ಮಾರ್ಗದರ್ಶನ ಅವಿರತವಾಗಿ ದೊರೆಯುತ್ತಿದ್ದು, ನಮ್ಮ ಸಂಸ್ಥೆಯ ಕಾನೂನಾತ್ಮಕ ಮಂಡಲಿಗಳು ಸಲಹೆ - ಸೂಚನೆಗಳನ್ನು ನೀಡಿ, 'ರಾಷ್ಟ್ರೀಯ ಮಹತ್ವದ ಸಂಸ್ಥೆ' ಸ್ಥಾಪಿಸುವಲ್ಲಿ ಇಟ್ಟ ಮೊದಲ ಹೆಜ್ಜೆಗಳಿಗೆ ಉತ್ತೇಜನ - ಪ್ರೋತ್ಸಾಹ ನೀಡಿರುತ್ತಾರೆ. ತಮ್ಮ, ಈ ಎಲ್ಲಾ ಸಹಕಾರಕ್ಕಾಗಿ, ನಾನು ಪ್ರತಿಯೊಬ್ಬರಿಗೂ, ಚಿರಋಣಿಯಾಗಿರುತ್ತೇನೆ.

ಹಿಂದಿನ ನಿರ್ದೇಶಕರು, ಹಾಕಿ ಕೊಟ್ಟ ಹಾದಿ, ನಿಮ್ಹಾನ್ಸ್ ನಲ್ಲಿ ನಾನು ಕಾರ್ಯನಿರ್ವಹಿಸಲು ರೂಪರೇಷೆಯಾಗಿ ಅನುವುಮಾಡಿ ಕೊಟ್ಟಿತು. ಇದಕ್ಕಾಗಿ, ನಾನು ಪ್ರತಿಯೊಬ್ಬರಿಗೂ ಗೌರವಾದರಗಳನ್ನು ಸಲ್ಲಿಸಬಯಸುತ್ತೇನೆ. ನಿಮ್ಹಾನ್ಸ್ ನಲ್ಲಿ ರೂಢಿಗೆ ಬಂದಿರುವ ಪಾರದರ್ಶಕತೆ ಮತ್ತು ಹೊಣೆಗಾರಿಕೆ ಒಂದು ಉತ್ತಮ ಮಾದರಿಯೇ ಹೌದು.

ನನ್ನ ಕಾರ್ಯಾವಧಿಯಲ್ಲಿ, ನಮ್ಮ ಸಂಸ್ಥೆಗೆ ಹಾಗೂ ನಿಮ್ಮೆಲ್ಲರಿಗೂ, ಸಾಧ್ಯವಾದಷ್ಟು ಮಟ್ಟಿಗೆ ಉತ್ತಮವಾದದ್ದನ್ನು ಮಾಡಲು ಪ್ರಯತ್ನಿಸಿದ್ದೇನೆ. ಆದರೆ, ಕೆಲವೊಮ್ಮೆ ನಿಮಗೆ ನಾನು ಕಠಿಣಇಲ್ಲವೇ ಅಸಮಂಜಸ ಎನಿಸಿರಬಹುದು. ನಮ್ಮ ಸಂಸ್ಥೆಯ ಪ್ರತಿಷ್ಠೆ ಮತ್ತು ಕ್ಷಮತೆ ಸಲುವಾಗಿ ಮಾತ್ರ ಈ ರೀತಿ ನಿರ್ಧಾರ ತೆಗೆದುಕೊಂಡಿದ್ದೇನೆ ಎಂದು ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳಬಯಸುತ್ತೇನೆ.

ಈ ಐದು ವರ್ಷಗಳ ಯಶಸ್ಸುನಿಮ್ಮೆಲ್ಲರಿಗೂ ಸಲ್ಲುತ್ತದೆ, ಸೋಲು-ವಿಫಲತೆಗಳು ಸಂಪೂರ್ಣ ನನ್ನವು.

ಮುಂದೆ ಬರುವ ನಿರ್ದೇಶಕರು, ನಿಮ್ಹಾನ್ಸ್ ಸಂಸ್ಥೆಯನ್ನು ಇನ್ನೂ ಉಚ್ಛ್ರಾಯ ಸ್ಥಿತಿಗೆ ಮೇಲ್ಮಟ್ಟಕ್ಕೆ ಒಯ್ಯುತ್ತಾರೆಂದು ನನಗೆ ಖಂಡಿತ ಭರವಸೆ ಇದೆ. ತಂದೆ ತನ್ನ ಮಗುವಿನ ಬೆಳವಣಿಗೆಯನ್ನು ನೋಡಿ ಆನಂದಿಸುವಂತೆ, ನಾನೂ ಸಹ, ನಮ್ಮ ಈ ಸಂಸ್ಥೆ ಹೊಸ ದಿಕ್ಕಿನಲ್ಲಿ, ವಿನೂತನ ಕಾರ್ಯಯೋಜನೆಯಲ್ಲಿ, ಎತ್ತರಕ್ಕೆ  ಮತ್ತೂ ಇನ್ನೂ ಹೆಚ್ಚು ಎತ್ತರಕ್ಕೆ ಸಾಗುತ್ತಿರುವುದನ್ನು ನೋಡಿ ಸಂತೋಷಿಸುತ್ತೇನೆ.

ಈ ನಿಟ್ಟಿನಲ್ಲಿ, ಎಲ್ಲರಿಗೂ ಇನ್ನಷ್ಟು ಏಳಿಗೆಯಾಗಲಿ, ಹೊಸ ಹಾದಿಯಲ್ಲಿ ಪ್ರತಿಯೊಬ್ಬರೂ ಸುಖ, ಸಂತೋಷ, ಸಂವೃದ್ಧಿ ಹಾಗೂ ನೆಮ್ಮದಿ ದೊರೆಯಲಿ ಎಂದು ಆಶಿಸುತ್ತೇನೆ.

28 ಜೂನ್ 2015

ಆದರದೊಂದಿಗೆ,

ಡಾ|| ಪಿ ಸತೀಶ್ ಚಂದ್ರ

ನಿರ್ದೇಶಕರು - ಕುಲಪತಿಗಳು